ಇನ್ನೇನಾದರೂ ಕ್ರಮ ಕೈಗೊಳ್ಳಲು ಉದ್ದೇಶಿಸಲಾಗಿದೆಯೇ? ವಿವರ ನೀಡುವುದು?

ಆ ರಾಜ್ಯದಲ್ಲಿ ಕುಡಿಯುವ ನೀರು ಮತ್ತು ಮನೆ ದೀಪಗಳಿಗಾಗಿ ಪ್ರತಿ ಗ್ರಾಮದಲ್ಲಿಯೂ ಗ್ರಾಮ ವಂಮಿತಿಯಲ್ಲಿ ಪ್ರತ್ಯೇಕ ಟ್ರಾನ್ಸ್‌ಫಾರ್ಮರ್ ಅಳವಡಿಸುವ ಉದ್ದೇಶಿತ ಯೋಜನೆಯು ಸರ್ಕಾರದ ಮುಂದಿದೆಯೇ? ಈ ಉದ್ದೇಶಿತ ಯೋಜನೆಯಿಂದ ಕುಡಿಯುವ ನೀರು ಮತ್ತು ಮನೆ ದೀಪಗಳ ಸಮಸ್ಯೆಯನ್ನು ಬಗೆಹರಿಸಬಹುದಲ್ಲವೇ? ಪ್ರತಿ ಗ್ರಾಮ ಪರಿಮಿತಿಯಲ್ಲಿ ಟ್ರಾನ್ಸ್‌ಫಾರ್ಮರ್ ಅಳವಡಿಸಲು ತಗಲುವ ಅಂದಾಜು ವೆಚ್ಚವೆಷ್ಟು? ಈ ಯೋಜನೆಯನ್ನು ಸಾರ್ವಜನಿಕರ ಹಿತದೃಷ್ಟಿಯಿಂದ ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗುವುದೇ? (ವಿವರ ನೀಡುವುದು)?

ಉತ್ತರ

ಆ ನಂತೆಮರಳ್ಳಿ ಕ್ಷೇತ್ರ ವ್ಯಾಪ್ತಿಯ ದೇವನೂರು ಉಪ ಕೇಂದ್ರದಲ್ಲಿ ಹೆಚ್ಚುವರಿಯಾಗಿ 1x6 3 ಎಂ ವಿ ಎ ಸಾಮರ್ಥ್ಯದ ಪವರ್ ಟ್ರಾನ್ಸ್‌ಫಾರ್ಮರ್‌ನ್ನು ಅಳವಡಿಸುವ ಕೆಲಸವು ಪ್ರಗತಿಯಲ್ಲಿದೆ ಸದರಿ ಕೆಲಸವನ್ನು ಮಾರ್ಚ್-2002ರ ಅಂತ್ಯದ ವೇಳೆಗೆ ಪೂರ್ಣಗೊಳಿಸುವ ಗುರಿ ಹೊಂದಲಾಗಿದೆ ಹಾಲಿ ಇರುವ 6 3 ಎಂ ವಿ ಎ ಸಾಮರ್ಥ್ಯದ ಪವರ್ ಟ್ರಾನ್ಸ್‌ಫಾರ್ಮರ್ ಜೊತೆಗೆ ಹೆಚ್ಚುವರಿಯಾಗಿ ಅಳವಡಿಸಲಾಗುವ 6 3 ಎಂ ವಿ ಎ ಸಾಮರ್ಥ್ಯದ ಪವರ್ ಟ್ರಾನ್ಸ್‌ಫಾರ್ಮರ್ ಜೊತೆಗೆ, ಹೆಚ್ಚುವರಿಯಾಗಿ ಅಳವಡಿಸಲಾಗುವ 6 3 ಎಂ ವಿ ಎ ಸಾಮರ್ಥ್ಯದ ಪವರ್ ಟ್ರಾನ್ಸ್‌ಫಾರ್ಮರ್ ಚಾಲನೆಗೊಂಡ ನಂತರ ಒಟ್ಟು ಸುಮಾರು 19 ಮೆಗಾ ವ್ಯಾಟ್ ವಿದ್ಯುತ್ ಬೇಡಿಕೆಯನ್ನು ನೀಗಿಸಲು ಸಾಧ್ಯವಾಗುವುದು

ಆ ಗ್ರಾಮೀಣ ಕುಡಿಯುವ ನೀರಿನ ಯೋಜನೆಗಳಿಗೆ ಹಾಗೂ ಮನೆಗಳ ದೀಪಗಳಿಗೆ ವಿದ್ಯುತ್ ಸರಬರಾಜು ನೀಡುವ ಸಂದರ್ಭಗಳಲ್ಲಿ ಪ್ರಸ್ತುತ ವಿದ್ಯುತ್ ಜಾಲವನ್ನು ತಾಂತ್ರಿಕವಾಗಿ ಪರಿಶೀಲಿಸಿ ಕಡಿಮ ವೋಲ್ಟೇಜ್ ಉಂಟಾಗುವ ಸಂದರ್ಭಗಳಲ್ಲಿ ಪ್ರತ್ಯೇಕ ಟ್ರಾನ್ಸ್‌ಫಾರ್ಮರ್‌ಗಳನ್ನು ಅಳವಡಿಸಲಾಗುವುದು ಲೈನ್‌ನ ವಿನ್ಯಾಸದೊಂದಿಗೆ ಸೇರಿದಂತೆ ಪ್ರತಿ ಟ್ರಾನ್ಸ್ ಫಾರ್ಮರ್ ಅಳವಡಿಸಲು ತಗಲುವ ಅಂದಾಜು ವೆಚ್ಚ ರೂ 2 33,000-00

ಪಿರಿಯಾವಟ್ಟಣ ಏತ ನೀರಾವರಿ ಕಾಮಗಾರಿಗೆ ವಿದ್ಯುತ್ ಸೌಲಭ್ಯ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 147(30)

ಸದಸ್ಯರ ಹೆಸರು ಶ್ರೀ ಬಸವರಾಜು ಹೆಚ್ ಸಿ (ಪಿರಿಯಾಪಟ್ಟಣ)

ಉತ್ತರಿಸುವ ಸಚಿವರು ವೀರಕುಮಾರ್ ಅ ಪಾಟೀಲ್(ಇಂದನ ರಾಜ್ಯ ಸಚಿವರು)

ಪ್ರಶ್ನೆ

ಅ) ಪಿರಿಯಾವಟ್ಟಣ ಏತ ನೀರಾವರಿ ಕಾಮಗಾರಿಗೆ ಬಹಳ ಮುಖ್ಯವಾಗಿ ಬೇಕಾಗಿರುವ ವಿದ್ಯುತ್ ಸೌಲಭ್ಯ ಕಾಮಗಾರಿ ಯಾವ ಹಂತದಲ್ಲಿದೆ?

ಆ) ಕಾಮಗಾರಿಯು ವಿಳಂಬವಾಗಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, ವಿಳಂಬವಾಗಲು ಕಾರಣವೇನು? ಈ ವಿಳಂಬವನ್ನು ತಡೆಗಟ್ಟಲು ಹಾಗೂ ಆದರ ಪರಿಹಾರಕ್ಕಾಗಿ ತೆಗೆದುಕೊಂಡ ಕ್ರಮವೇನು?

ಉತ್ತರ

ಅ) ಪಿರಿಯಾವಟ್ಟಣ ಏತ ನೀರಾವರಿ ಕಾಮಗಾರಿಗೆ ಬಹಳ ಮುಖ್ಯವಾಗಿ ಬೇಕಾಗಿರುವ 66 ಕೆ ವಿ ವಿದ್ಯುತ್ ಒದಗಿಸಲು ರಾಮನಾಥಪುರ 66 ಕೆ ವಿ ವಿದ್ಯುತ್ ಉಪ ಕೇಂದ್ರದಿಂದ ಕರಡಿಲಕ್ಕನಕೆರೆ ಮುಖಾಂತರ ಕುಶಾಲನಗರದ 66 ಕೆ ವಿ ವಿದ್ಯುತ್ ಉಪ ಕೇಂದ್ರಕ್ಕೆ 66 ಕೆ ವಿ ವಿದ್ಯುತ್ ಮಾರ್ಗ ನಿರ್ಮಾಣ ಕೆಲಸ ಪ್ರಗತಿಯಲ್ಲಿದೆ ಈ ಕಾಮಗಾರಿಗೆ ಒಟ್ಟು 100 ಗೋಪುರಗಳನ್ನು ನಿರ್ಮಿಸಬೇಕಾಗಿದ್ದು, ಈಗಾಗಲೇ 97 ಸ್ಟಬ್‌ಗಳ ಕಾಂಕ್ರೀಟ್ ಕಾಮಗಾರಿ ಪೂರೈಸಲಾಗಿದ್ದು, 95 ಗೋಪುರಗಳನ್ನು ನಿರ್ಮಾಣ ಮಾಡಲಾಗಿದೆ 50 ಸ್ಪ್ಯಾನಗಳಷ್ಟು ವಿದ್ಯುತ್ ವಾಹಕವನ್ನು ಎಸೆಯಲಾಗಿದೆ

ಆ) ಈ ಸಂಬಂಧ ಅರಣ್ಯ ಇಲಾಖೆಯ ಅನುಮತಿ ನಿರೀಕ್ಷಿಲಾಗುತ್ತಿದೆ

ಇ) ಈ ಕಾಮಗಾರಿಯ ವಿಳಂಬಕ್ಕೆ ಕಾರಣಗಳೇನೆಂದರೆ, ಈ ಮಾರ್ಗವು ಗೋಬ್ಲಿ ಅರಣ್ಯ ಪ್ರದೇಶ ಮತ್ತು ಚೆನ್ನಕಲ್ ಕಾವಲ್ ಅರಣ್ಯ ಪ್ರದೇಶದ ಮುಖಾಂತರ ಹಾದು ಹೋಗಬೇಕಾಗಿದ್ದು, ಇದರಲ್ಲಿ ಗೋಬ್ಲಿ ಅರಣ್ಯ ಪ್ರದೇಶದ ಮೂಲಕ ಮೇಲೆ ತಿಳಿಸಿರುವ ವಿದ್ಯುತ್ ಮಾರ್ಗವು ಹಾದು ಹೋಗಲು ಅನುಮತಿಗಾಗಿ ರೂ 2 71 ಲಕ್ಷ ನೀಡಲಾಗಿದ್ದು ಅನುಮತಿ ನಿರೀಕ್ಷಿಸಲಾಗಿದೆ ಚೆನ್ನಕಲ್‌ಕಾವಲ್ ಅರಣ್ಯ ಪ್ರದೇಶದ ಮೂಲಕ ವಿದ್ಯುತ್ ಮಾರ್ಗ ಹಾದು ಹೋಗಲು ಅನುಮತಿ ಕೋರಿ ಬೇಕಾದ ಎಲ್ಲಾ ದಾಖಲೆಗಳನ್ನು ಡಿ ಸಿ ಎಫ್ ಮಡಿಕೇರಿರವರ ಮುಖಾಂತರ ಮುಖ್ಯ ಅರಣ್ಯಾಧಿಕಾರಿ ಬೆಂಗಳೂರು ರವರಿಗೆ ಸಲ್ಲಿಸಲಾಗಿದ್ದು, ಇನ್ನು ಅವರಿಂದ ಅನುಮತಿ ದೊರಕಿರುವುದಿಲ್ಲ

ಆದುದರಿಂದ ಈ ಕಾಮಗಾರಿ ವಿಳಂಬವಾಗಿದೆ ಅರಣ್ಯ ಇಲಾಖೆಯಿಂದ ಅನುಮತಿ ಪಡೆಯಲು ಎಲ್ಲಾ ಪ್ರಯತ್ನಗಳನ್ನು ಮಾಡಲಾಗಿದ್ದು, ಅತೀ ಶೀಘ್ರದಲ್ಲಿ ಅರಣ್ಯ ಇಲಾಖೆಯಿಂದ ಅನುಮತಿಯನ್ನು ನಿರೀಕ್ಷಿಸಲಾಗಿದ್ದು, ಅನುಮತಿ ದೊರೆತ ತಕ್ಷಣ ಉಳಿದ ಕೆಲಸಗಳನ್ನು ಪೂರ್ಣಗೊಳಿಸಲಾಗುವುದು

ಪಿರಿಯಾಪಟ್ಟಣದಲ್ಲಿ ವಿದ್ಯುತ್ ಲೈನ್ ಕಾಮಗಾರಿಗಳ ವಿಳಂಬ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 148(33)

ಸದಸ್ಯರ ಹೆಸರು ಶ್ರೀ ಬಸವರಾಜು ಹೆಚ್ ಸಿ (ಪಿರಿಯಾಪಟ್ಟಣ)

ಉತ್ತರಿಸುವ ಸಚಿವರು ಶ್ರೀ ವೀರಕುಮಾರ್ ಆ ಪಾಟೀಲ್(ಇಂಧನ ಸಚಿವರು)

ಪ್ರಶ್ನೆ

ಅ) ಪಿರಿಯಾಪಟ್ಟಣದ ಏತ ನೀರಾವರಿ ಯೋಜನೆಗೆ ಪೂರಕವಾಗಿ ರಾಮನಾಥಪುರದಿಂದ 66 ಕೆ ವಿ ವಿದ್ಯುತ್ ಲೈನ್ ಕಾಮಗಾರಿ ಯಾವ ಹಂತದಲ್ಲಿದೆ?

ಆ) ಸಂಸ್ಥೆಗೆ ಹಣ ಜಮೆ ಮಾಡಿ ಎರಡು ವರ್ಷ ಕಳೆದಿದ್ದರೂ ಕಾಮಗಾರಿ ಪೂರ್ಣವಾಗದಿರಲು ಕಾರಣವೇನು?

ಇ) ಕಾಮಗಾರಿ ಪೂರ್ಣಗೊಳಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮವೇನು ಹಾಗೂ ಎಂದು ಪೂರ್ಣಗೊಳಿಸಲಾಗುವುದು?

ಉತ್ತರ

ಅ) ಪಿರಿಯಾಪಟ್ಟಣ ತಾಲ್ಲೂಕು ಕರಡಿಲಕ್ಕನಕೆರೆ ಏತ ನೀರಾವರಿ ಯೋಜನೆಗೆ ಉದ್ದೇಶಿತ 66 ಕೆ ವಿ ರಾಮನಾಥಪುರ ಕರಡಿಲಕ್ಕನಕೆರೆ- ಕುಶಾಲನಗರ ವಿದ್ಯುತ್ ಮಾರ್ಗದಿಂದ ಪೂರೈಸಲಾಗುವುದು ಈ ಕಾಮಗಾರಿಗೆ ಒಟ್ಟು 100 ಗೋಪುರಗಳನ್ನು ನಿರ್ಮಿಸಬೇಕಾಗಿದ್ದು, ಈಗಾಗಲೇ 97 ಸ್ಟಬ್‌ಗಳ ಕಾಂಕ್ರೀಟ್ ಕಾಮಗಾರಿ ಪೂರೈಸಲಾಗಿದ್ದು 95 ಗೋಪುರಗಳನ್ನು ನಿರ್ಮಾಣ ಮಾಡಲಾಗಿದೆ 50 ಸ್ಪಾನಗಳಷ್ಟು ವಿದ್ಯುತ್ ವಾಹಕವನ್ನು ಎಳೆಯಲಾಗಿದೆ

ಆ) ಈ ಕಾಮಗಾರಿಯ ವಿಳಂಬಕ್ಕೆ ಕಾರಣಗಳೇನೆಂದರೆ ಈ ಮಾರ್ಗವು ಗೋಬ್ಲಿ ಅರಣ್ಯ ಪ್ರದೇಶ ಮತ್ತು ಚೆನ್ನಕಲ್ ಕಾವಲ್ ಅರಣ್ಯ ಪ್ರದೇಶದ ಮುಖಾಂತರ ಹಾದು